


ಎಡದಿಂದ ಬಲಕ್ಕೆ:

1. ಸಂತರೊಡನೆ ಪಾದಯಾತ್ರೆ ಮಾಡಿ ಗಳಿಸಿದ್ದಾದರೂ ಏನು? 4
3. ಇದು ಹೊಸದು ಹೌದೇ ಎಂಬುದರಲ್ಲೇ ಭಾರೀ ಸಂಶಯ. 3
4. ನಾಳೆಯ ದಿನದ ಕೆಲಸಕ್ಕೆ ಇಂತಹ ತಾವರೆಯೇ ಸರಿ 3
6. ಕಳ್ಳರನ್ನೂ, ಕಪಿಗಳನ್ನೂ ಕಂಡೊಡನೆ ಹಿಂದುಮುಂದಾದ ಹಕ್ಕಿ 4
7. ಎಲ್ಲರ ಅಡಗುದಾಣಗಳನ್ನೂ ಹುಡುಕಹೋಗುವುದೇ ಅವನ ದೋಷ 4
9. ಸುಂಕದವರ ಕೈಗೆ ಸಿಗುವುದೇನು ಚಂದ್ರ? 4
12. ವರುಷವಾಗುವುದರಲ್ಲಿ ಪ್ರದರ್ಶನಗೊಂಡಿತ್ತು ಒಂಬತ್ತೂ ರುಚಿ 4
15. ಆತನಿಗೇಕೆ ಗೊತ್ತಿಲ್ಲ, ಕಳೆದುಹೋದ ಸಮಯ? 4
17. ಗಿರಿಧಾಮಕ್ಕೆ ಬಂದಾಗಲೆಲ್ಲ ಆತನದು ಇದೆಂಥ ದಬ್ಬಾಳಿಕೆ ? 4
18. ಕೌಶಲ್ಯಮಯ ನಿರ್ಮಿತಿಯಲ್ಲೂ ಬೆರೆತಿದೆ ಅಷ್ಟಿಷ್ಟು ಮಾಲಿನ್ಯ 3
19. ಎಷ್ಟು ಸುಮ್ಮನಿದ್ದರೂ ಅಡಗುವುದಿಲ್ಲ ಬಿಡಿ, ಆಕೆಯ ಕೋಪ 3
20. ಮಾಯಾ ನಗರಿ ಅಲ್ಲ; ಇದು ಮೃತ್ಯು ದೇವತೆಯ ನಗರ! 4

ಮೇಲಿಂದ ಕೆಳಕ್ಕೆ:

1. ಸಣ್ಣದೊಂದು ಹಗರಣಕ್ಕೇ ನಡೆದುಹೋಯಿತು ಕೊಲೆ! 4
2. ಪೀನಮಸೂರವನ್ನು ನಿರ್ಮಿಸುವ ಕ್ರಮ ಜ್ಞಾಪಕಕ್ಕೆ ಬರುವಂತೆ ಮಾಡು. 4
3. ಅಕೆಯ ಸ್ವಭಾವ ಈಗಲಾದರೂ ಬದಲಾಗುವ ಸಾಧ್ಯತೆ ಇದೆಯೇ? 3
5. ಕೆಂಡವನ್ನು ಕಂಡರೇ ಆತನಿಗೆ ಭಯಕಂಪನ! 3
7. ಅಲ್ಲಿ ಅಧ್ಯಯನಕ್ಕೆ ಬಂದವರೆಲ್ಲ ಆತನ ಕೈಕೆಳಗೇ ಹೌದೇ? 3
8. ಭಾರೀ ಗೂಡಿನಂತಿದೆಯಲ್ಲ, ಈ ಬಟ್ಟೆ ಮನೆ? 3
10. ದೇವತೆಯಂತೆ ಬಂದವರನ್ನು ಕಾಣಲು ಇಷ್ಟೊಂದು ಅವಸರ 3
11. ಸವಿಯಾಗಿರುವ ಕಾಲ ಮುಗಿದರೂ ಬರುತ್ತಿದೆ, ಮಾವಿನ ಹಣ್ಣು 3
13. ಇದ್ದಕ್ಕಿದ್ದಂತೆ ಕಾಣೆಯಾದವನು ಒಬ್ಬ ವರ್ತಕ 3
14. ದೇಶದ ಆದಾಯ ಹೆಚ್ಚಲೆಂದು ಹಾರೈಸುವುದು ಒಳ್ಳೆಯದು ತಾನೇ? 4
15. ಮುರುಗನಿಗೆ ತರಿಸಿರುವ ವಸ್ತ್ರದ ಮಡಿಕೆಗಳು ಮುರಿದಿಲ್ಲ! 4
16. ಕಾಡನ್ನು ಕಡಿಸುವವರು ಕಂಡರೆ ಕಾಲಿಡದಂತೆ ಹಿಂಸೆ ಕೊಡು 3

## 30—07—2020 ಉತ್ತರಗಳು

ಎಡದಿಂದ ಬಲಕ್ಕೆ:

1.ಅಧ್ಯಾಪನ 3. ಅನುಜ 4. ಲಿಮಾಹ (ಹಮಾಲಿ ಹಿಂದುಮುಂದು) 6. ಪ್ರಚಾರಕ 8. ದಳಪತಿ 10. ನವನೀತಿ 2. ನರಬಲ 16. ಸಹಿತ 17. ರಕ್ಷಿತ 18. ಕಡಿವಾಣ

ಮೇಲಿಂದ ಕೆಳಕ್ಕೆ:

1.ಅಜರ 2. ನಲಿವು 3. ಅಸ್ಥಿರ 5. ಹವಳ 6. ಪ್ರಸಾಧನ 7. ಕರಾಮತಿ 8. ದಡ್ಡತನ 9. ತಿಲತೈಲ 11. ನೀರಸ 13. ರಜತ 14. ಪಾತಕ 15. ಚಾರಣ

ಪ್ರಶ್ನಾಂಕಣ

## ಆಫ್ರಿಕಾದಲ್ಲೂ ಉಂಟೇ ಮಹಾ ಸರೋವರ?

ಹೌದು, ಉಂಟು. ಒಂದಲ್ಲ, ಎರಡಲ್ಲ, ಮೂರು ಮಹಾ ಸರೋವರಗಳಿವೆ! ಉತ್ತರ ಅಮೆರಿಕ ಖಂಡದ ಪಂಚ ಮಹಾ ಸರೋವರಗಳಂತೆಯೇ ಇವು ಕೂಡ ವಿಸ್ಮಯದ ದಾಖಲೆಗಳನ್ನು ಸ್ಥಾಪಿಸಿವೆ; ತುಂಬ ದೀರ್ಘ ಇತಿಹಾಸವನ್ನೂ ಪಡೆದಿವೆ!

ಆಫ್ರಿಕಾ ಖಂಡವನ್ನು ರೂಪಿಸಿರುವ ಭೂ ತೊಗಟೆಯ ಶಿಲಾ ಫಲಕ 'ಆಫ್ರಿಕನ್ ಪ್ಲೇಟ್' ಧರೆಯಾಳದ ಪ್ರಬಲ ವಿದ್ಯಮಾನಗಳಿಂದಾಗಿ ಈಗ್ಗೆ ಸುಮಾರು 35 ದಶಲಕ್ಷ ವರ್ಷ ಹಿಂದೆಯೇ ಆಫ್ರಿಕಾದ ಪೂರ್ವದುದ್ದಕ್ಕೂ ಬಿರುಕು ಬಿಟ್ಟು ಮುರಿದಿದೆ! ಆಗಿನಿಂದಲೂ ಆ ಶಿಲಾ ಫಲಕದ ಎರಡೂ ಭಾಗಗಳು (ಪೂರ್ವದ ಅರೇಬಿಯನ್ ಪ್ಲೇಟ್ ಮತ್ತು ಪಶ್ಚಿಮದ ನೂಬಿಯನ್ ಪ್ಲೇಟ್) ವಿರುದ್ಧ ದಿಕ್ಕುಗಳಲ್ಲಿ ತುಂಬ ನಿಧಾನವಾಗಿ ದೂರಸರಿಯುತ್ತಿವೆ. ತತ್ಪರಿಣಾಮವಾಗಿ ಅಲ್ಲಿ ಉತ್ತರದಿಂದ ದಕ್ಷಿಣಕ್ಕೆ 3,000 ಕಿಲೋಮೀಟರ್ ಉದ್ದದ ವಿಸ್ತಾರ ಕಣಿವೆ 'ದಿ ಗ್ರೇಟ್ ರಿಫ್ಟ್ ವ್ಯಾಲೀ' ರೂಪುಗೊಂಡಿದೆ (ಆ ಕಣಿವೆಯನ್ನು ಚಿತ್ರ1 ರಲ್ಲೂ, ಭೂಪಟ ಚಿತ್ರ 2 ರಲ್ಲಿ ಬಾಣದ ಗುರುತು ಸೂಚಿಸುತ್ತಿರುವಲ್ಲೂ ನೋಡಿ). ಆಫ್ರಿಕ ಖಂಡದ 'ಬುರುಂಡಿ, ಕಾಂಗೋ ಗಣರಾಜ್ಯ, ಕೀನ್ಯಾ, ಮಲಾವೀ, ರುವಾಂಡಾ, ತಾಂಜಾನೀಯಾ ಮತ್ತು ಉಗಾಂಡಾ' ರಾಷ್ಟ್ರಗಳನ್ನೊಳಗೊಂಡ ಭಾರೀ ತಗ್ಗಿನ ಈ ಪ್ರದೇಶದಲ್ಲಿ ಕಾಲಕ್ರಮದಲ್ಲಿ ಹಲ ಬಗೆಗಳ ಜೀವಾವಾರಗಳು ಮತ್ತು ಜಲಾವಾರಗಳು ಸೃಷ್ಟಿಗೊಂಡಿವೆ. ಇದೇ ಪ್ರದೇಶದಲ್ಲಿ ಸಮೀಪ 30 ಸರೋವರಗಳು ಕೂಡ ಮೈದಳೆದಿವೆ (ಚಿತ್ರ3 ರಲ್ಲಿರುವ ಎ, ಬಿ, ಸಿ, ಡಿ, ಇ ಇತ್ಯಾದಿ). ಆ ಪೈಕಿ ಮೂರು ಸರೋವರಗಳು ಆಳ, ವೈಶಾಲ್ಯ, ಜಲಸಂಗ್ರಹ ಇತ್ಯಾದಿ ಗುಣಗಳಲ್ಲಿ 'ಮಹಾನ್' ಅಳತೆಗಳನ್ನು ಮುಟ್ಟಿವೆ ; 'ಆಫ್ರಿಕದ ಮಹಾ ಸರೋವರಗಳು' ಎಂದೇ ವಿಶ್ವಖ್ಯಾತವಾಗಿವೆ. ಆ ಸರೋವರಗಳ ಅತ್ಯಂತ ಸಂಕ್ಷಿಪ್ತ ಪರಿಚಯ ಇಲ್ಲಿದೆ.

1. ವಿಕ್ಟೋರಿಯಾ ಸರೋವರ: ವಿಸ್ತಾರದಲ್ಲಿ ಆಫ್ರಿಕಾದಲ್ಲಿ ಪ್ರಥಮ ಸ್ಥಾನದಲ್ಲೂ, ಇಡೀ ಪೃಥ್ವಿಯಲ್ಲಿ ದ್ವಿತೀಯ ಸ್ಥಾನದಲ್ಲೂ ಇರುವ ಶುದ್ಧ ನೀರಿನ ಸರೋವರ ಇದು (ಚಿತ್ರ3 ರಲ್ಲಿ ಬಾಣದ ಗುರುತು E ಯನ್ನು ನೋಡಿ). ಈ ಸರೋವರದ ವಿಸ್ತಾರ 68,800 ಚದರ ಕಿಲೋಮೀಟರ್!




2. ತಾಂಗನ್ಯೀಕಾ ಸರೋವರ: 32,900 ಚದರ ಕಿಲೋಮೀಟರ್ ವೈಶಾಲ್ಯ ಇರುವ ಈ ಮಹಾ ಸರೋವರ (ಚಿತ್ರ 3ರಲ್ಲಿ D ನೋಡಿ) 1,400 ಮೀಟರ್ ಆಳ ಇದೆ. ಆಳದಲ್ಲಿ ಈ ಸರೋವರ ವಿಶ್ವದಲ್ಲೇ ದ್ವಿತೀಯ ಸ್ಥಾನವನ್ನು ಹೊಂದಿದೆ.

3. ಮಲಾವೀ ಸರೋವರ: ಆಫ್ರಿಕಾದ ಸರೋವರಗಳಲ್ಲಿ ವಿಸ್ತೀರ್ಣದಲ್ಲಿ ತೃತೀಯ ಸ್ಥಾನವನ್ನು ಪಡೆದಿರುವ ಮತ್ತು ವಿಶ್ವದಲ್ಲಿ ಎಂಟನೇ ಸ್ಥಾನವನ್ನು ಹೊಂದಿರುವ ಈ ಸರೋವರದ ವಿಸ್ತಾರ 30,000 ಚದರ ಕಿಲೋಮೀಟರ್.

ವಿಸ್ಮಯ ಏನೆಂದರೆ, ಇಡೀ ಧರೆಯ ಮೇಲ್ಮೈನ ದ್ರವ ರೂಪದ ಶುದ್ಧ ಜಲದ ಶೇಕಡ 25 ಭಾಗ ಈ ಸರೋವರಗಳಲ್ಲೇ ಸಂಗ್ರಹವಾಗಿದೆ; ಧರೆಯ ಸಕಲ ಮತ್ಸ್ಯಗಳ ಶೇಕಡ 10 ರಷ್ಟು ಪ್ರಭೇದಗಳು ಈ ಸರೋವರಗಳಲ್ಲೇ ನೆಲೆಸಿವೆ.

■ ಎನ್. ವಾಸುದೇವ್